# ಭಲೇ ಜೋಡಿ



ಹೀಗೆ ಮೈಮೇಲೆಲ್ಲ ಚೇಳುಗಳನ್ನು ಬಿಟ್ಟುಕೊಂಡಿರುವ ಈಕೆಯ ಹೆಸರು ಕಂಚನಾ ಕೆಟ್ಕೇವ್. ಮಹಾನ್ ಸಾಹಸಿಯಾದ ಈಕೆ 3400 ಚೇಳುಗಳೊಂದಿಗೆ ಮೂವತ್ತೆರಡು ದಿನಗಳನ್ನು ಕಳೆದು ಗಿನ್ನಿಸ್ ವಿಶ್ವ ದಾಖಲೆ ಮಾಡಿದ್ದಾಳೆ. ಅಷ್ಟೇ ಅಲ್ಲ ಹನ್ನೆರಡು ಚದರಡಿ ಅಳತೆಯ ಪುಟ್ಟ ಗಾಜಿನ ಪೆಟ್ಟಿಗೆಯಲ್ಲಿ ಐದು ಸಾವಿರ ದೊಡ್ಡ ಗಾತ್ರದ ಚೇಳುಗಳೊಂದಿಗೆ ಈಕೆ ಮೂವತ್ಮೂರು ದಿನಗಳನ್ನು ಕಳೆದು ತನ್ನದೇ ಹಳೆಯ ವಿಶ್ವದಾಖಲೆಯನ್ನು ಮುರಿದಿದ್ದಾಳೆ. ಹೀಗೆ ಚೇಳುಗಳೊಂದಿಗೆ ವಾಸ ಮಾಡಿದರೆ ಅವು ಸುಮ್ಮನಿರುತ್ತದೆಯೇ? ಬರೋಬ್ಬರಿ ಹದಿಮೂರು ಚೇಳುಗಳು ಈಕೆಯನ್ನು ಕಚ್ಚಿದ್ದರೂ ಏನೂ ಆಗದೆ ಬದುಕುಳಿದಿದ್ದಾಳೆ!

ಥಾಯ್ಲ್ಯಾಂಡ್ ದೇಶದ ಪಟ್ಟಾಯ ನಗರದ ಶಾಪಿಂಗ್ ಮಾಲ್‌ನಲ್ಲಿ ಚೇಳುಗಳೊಂದಿಗೆ ವಾಸವಾಗಿದ್ದಾಗ ಈಕೆಯನ್ನು ಕಂಡ ಸ್ಥಳೀಯರು ಹಾಗೂ ಪ್ರವಾಸಿಗರು ಬೆಕ್ಕಸ ಬೆರಗಾಗಿ ವೃಶ್ಚಿಕ ರಾಣಿ ಎಂದು ಕೂಗುತ್ತಾ ಈಕೆಯನ್ನು ಹುರಿದುಂಬಿಸುತ್ತಿದ್ದರಂತೆ.

ತನ್ನ ಗಂಡ ನೀಡುತ್ತಿದ್ದ ಚೇಳುಗಳನ್ನು ಎರಡು ನಿಮಿಷಕ್ಕೂ ಹೆಚ್ಚಿನ ಅವಧಿ ಬಾಯಲ್ಲಿರಿಸಿಕೊಂಡು ಚಪ್ಪರಿಸಿರುವ ಇನ್ನೊಂದು ವಿಶ್ವ ದಾಖಲೆಯೂ ಕಂಚನಾ ಕೆಟ್ಕೇವ್ ಹೆಸರಿನಲ್ಲಿದೆ. ಆಕಸ್ಮಾತ್ ಯಾರಾದರೂ ತನ್ನ ಈ ದಾಖಲೆಯನ್ನು ಮುರಿದರೆ ಮತ್ತೆ ತನ್ನದೇ ಹೊಸ ವಿಶ್ವ ದಾಖಲೆ ಸ್ಥಾಪಿಸುವ ಇರಾದೆ ಈಕೆಯದು.

ಈಕೆಗಿಂತ ಏಳು ವರ್ಷ ಚಿಕ್ಕವನಾದ ಗಂಡ ಬಂಗಾವಿ ಸೈಯೀನ್ ಕೂಡ ಸಾಹಸದಲ್ಲೇನೂ ಕಡಿಮೆಯಿಲ್ಲ. ಸರಸರನೆ ನೆಲದ ಮೇಲೆ ಹರಿದಾಡುವ ಜರಿ (ಸೆಂಟಿಪೇಡ್) ಯೊಂದಿಗೆ ಇಪ್ಪತ್ತೆಂಟು ದಿನಗಳನ್ನು ಕಳೆದು ವಿಶ್ವ ದಾಖಲೆ ಮಾಡಿದ್ದಾನೆ.

ಮದುವೆ ಸ್ವರ್ಗದಲ್ಲಿ ನಡೆಯುತ್ತದೆ ಎಂಬ ಮಾತಿದೆ. ಆದರೆ ಇವರಿಬ್ಬರ ಮದುವೆ ನಡೆದಿದ್ದು ಹೆಣಗಳನ್ನು ಹೂಳುವ ಸಮಾಧಿಯ ಬಳಿಯಲ್ಲಿನ ಭೂತ ಬಂಗಲೆಯೊಂದರಲ್ಲಿ. ಹಾವುಗಳ ಜೊತೆಯಲ್ಲಿ ಸಾಹಸ ತೋರುತ್ತಿರುವ ಸಂದರ್ಭದಲ್ಲಿ ಪ್ರೇಮಾಂಕುರವಾದ ಈ ಜೋಡಿಯು ಪರಸ್ಪರ ಕೈಹಿಡಿದಿದ್ದು ಪ್ರೇಮಿಗಳ ದಿನದಂದು. ಥಾಯ್ ಪದ್ಧತಿಯಂತೆ ಮದುವೆ ಮಾಡಿಕೊಂಡ ಈ ಜೋಡಿಯ ಮೊದಲ ರಾತ್ರಿ ನಡೆದದ್ದು ಶವಪೆಟ್ಟಿಗೆಯಲ್ಲಿಯಂತೆ!

■ ವಿದ್ಯಾ ವಿ ಹಾಲಭಾವಿ



